ಅದ್ವೈತಪ್ರಕಾಶ ಗ್ರಂಥಮಾಲಾ ಏಕೋನವಿಂಶತಿಪುಷ್ಪಮ್

# ಅಧ್ಯಾಸಃ

ಲೇಖಕರು : ಡಾ॥ ರಾಘವೇಂದ್ರ ಆರೋಳ್ಳಿ, ಶೃಂಗೇರಿ

**ವೇದಾಂತಭಾರತೀ**

(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದಿಂದ ಮಾನಿತ ಸಂಶೋಧನ ಸಂಸ್ಥೆ)

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ – 571 602

ಮೈಸೂರು ಜಿಲ್ಲೆ ದೂ: 08223–262471

**Adhyasa**
Author : Dr. Raghavendra Arolli, Sringeri

First Print : 2023

Copies : 1000

© : *Vedanta Bharati*

Pages : 48

Price : ₹. 30.00

Published by :
**Vedanta Bharati**
(Recognized as Research Centre by
Karnataka Sanskrit University)
CM. Road, Krishnarajanagara - 571 602,
Mysore District. PH : 08223-262471

Printed at : Span print,
BSK 2nd Stage, Bangalore

श्री श्री जगदगुरु शङ्कराचार्य महासंस्थानम्, दक्षिणाम्नाय, श्री शारदापीठम्, श्रृङ्गेरी
**Sri Sri Jagadguru Shankaracharya Mahasamstanam**
**Dakshinamnaya, Sri Sharada Peetam, Sringeri - 577 139.**

5–18/2525 ಶೃಂಗೇರಿ 3–7–2011

ಪರಮೇಶ್ವರಾವತಾರ ಸ್ವರೂಪರಾದ ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರು **'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ'** ಎಂಬ ಅದ್ವೈತಸಿದ್ಧಾಂತವನ್ನು ತಮ್ಮ ಪ್ರಸ್ಥಾನತ್ರಯ–ಭಾಷ್ಯಗಳಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿರುತ್ತಾರೆ. ಸುರೇಶ್ವರಾ–ಚಾರ್ಯರಾದಿಯಾಗಿ ಅವರ ನಂತರದ ಆಚಾರ್ಯರುಗಳು ಆ ಸಿದ್ಧಾಂತವನ್ನು ಅಪ್ರಕಂಪ್ಯವನ್ನಾಗಿ ಮಾಡಿದ್ದಾರೆ. ಅದ್ವೈತ ಸಿದ್ಧಾಂತವನ್ನು ಸರಿಯಾಗಿ ಅರ್ಥಮಾಡಿಕೊಂಡವರಿಗೆ ಅದರಲ್ಲಿ ಯಾವ ವಿಧವಾದ ಸಂಶಯಗಳಿಗೆ ಅವಕಾಶವಿರುವುದಿಲ್ಲ.

ಈ ದೃಷ್ಟಿಯಿಂದ ವೇದಾಂತಭಾರತಿಯು **'ಅದ್ವೈತಪ್ರಕಾಶ'** ಎಂಬ ಹೆಸರಿನಿಂದ ಕನ್ನಡದಲ್ಲಿ ಲಘು ಪುಸ್ತಕಮಾಲೆಯನ್ನು ಪ್ರಕಾಶಪಡಿಸಲು ಉದ್ಯುಕ್ತವಾಗಿದೆಯೆಂದು ತಿಳಿದು ಶ್ರೀಶ್ರೀ ಜಗದ್ಗುರು ಮಹಾಸ್ವಾಮಿಗಳವರು ತುಂಬಾ ಸಂತೋಷಪಟ್ಟಿದ್ದಾರೆ. ಈ ಲಘು ಪುಸ್ತಕಗಳು ವೇದಾಂತಸಿದ್ಧಾಂತವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ತುಂಬಾ ಉಪಕಾರಕವಾಗಿವೆ. ಹಾಗೆಯೇ ಭಗವತ್ಪಾದರಾದಿಯಾಗಿ ಅದ್ವೈತಾಚಾರ್ಯರ ಬಗ್ಗೆ ಹೆಚ್ಚಿನ ತಿಳುವಳಿಕೆಯು ಈ ಗ್ರಂಥಮಾಲೆಯಿಂದ ಆಗುತ್ತದೆ. ವೇದಾಂತಜಿಜ್ಞಾಸುಗಳಿಗೆ ಆವಶ್ಯಕವು, ಅಭೀಪ್ಸಿತವು ಆದ ಈ ಕಾರ್ಯವು ನಿರ್ವಿಘ್ನವಾಗಿ ಸಂಪನ್ನಗೊಳ್ಳಲಿ, ಇದರಿಂದ ಅಧ್ಯಾತ್ಮಪಿಪಾಸುಗಳಿಗೆ ವಿಶಿಷ್ಟ ಪ್ರಯೋಜನವಾಗಲಿ ಎಂದು ಶ್ರೀಶ್ರೀ ಜಗದ್ಗುರು ಮಹಾಸ್ವಾಮಿಗಳವರು ಆಶೀರ್ವದಿಸಿದ್ದಾರೆ.

ಇಂತು

T. Dakshinamurthi

॥ ಶ್ರೀ ಚತುರ್ಭುಜ ಪಟ್ಟಾಭಿರಾಮೋ ವಿಜಯತೇ ॥







# ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ–571 602 ಮೈಸೂರು ಜಿಲ್ಲೆ

---

ಸ್ಥಳ : ಕೃಷ್ಣರಾಜನಗರ

ಒಬ್ಬ ವೈದ್ಯ ರೋಗಿಗೆ ಔಷಧವನ್ನು ಕೊಡಬೇಕಾದರೆ ರೋಗದ ಮೂಲವನ್ನು ಮೊದಲಿಗೆ ದೃಢಪಡಿಸಿಕೊಳ್ಳುತ್ತಾನೆ. ಬಳಿಕ ಯೋಗ್ಯವಾದ ಔಷಧವನ್ನು ಕೊಡುತ್ತಾನೆ. ಅದರಂತೆ ಸಂಸಾರಬಂಧನಕ್ಕೊಳಗಾದವನಿಗೆ ಅದರಿಂದ ಬಿಡುಗಡೆಯನ್ನು ತಿಳಿಸಲು ಹೊರಟ ನಮ್ಮ ಶಾಸ್ತ್ರಗಳು ನಮ್ಮ ಬಂಧನದ ಮೂಲಕಾರಣವನ್ನು ಬಹಳ ಸ್ಪಷ್ಟವಾಗಿ ತಿಳಿಸಿದವು. ಶಾಸ್ತ್ರಗಳು ತಿಳಿಸುವಂತೆ ನಮ್ಮ ಬಂಧನಕ್ಕೆ ಕಾರಣ ಅಧ್ಯಾಸ, ಈ ಅಧ್ಯಾಸಕ್ಕೆ ಕಾರಣ ಅವಿದ್ಯೆ.

ಆದ್ದರಿಂದಲೇ ಶ್ರೀ ಶಂಕರಭಗವತ್ಪಾದರು ಈ ಅಧ್ಯಾಸದ ವಿಷಯವನ್ನು ಪ್ರಸ್ಥಾನತ್ರಯದಲ್ಲೂ ವಿಸ್ತಾರವಾಗಿ ತಿಳಿಸಿದ್ದಾರೆ. ಮುಮುಕ್ಷುಗಳು ಅಧ್ಯಾಸದ ವಿಷಯವನ್ನು ತಿಳಿಯುವುದು ಅತ್ಯಂತ ಮುಖ್ಯ. ವೇದಾಂತಭಾರತಿಯು ಈ ಉದ್ದೇಶದಿಂದ ಎಲ್ಲರಿಗೂ ಅನುಕೂಲವಾಗಲಿ ಎಂದು ಕೇವಲ ಅಧ್ಯಾಸದ ಕುರಿತು ಒಂದು ಚಿಕ್ಕ ಪುಸ್ತಕವನ್ನು ಕನ್ನಡದಲ್ಲಿ ತರುತ್ತಿರುವುದು ಸಂತೋಷವನ್ನು ಉಂಟುಮಾಡಿದೆ. ವಿದ್ವಾನ್ ರಾಘವೇಂದ್ರ ಆರೋಳ್ಳಿಯವರು ಪರಿಶ್ರಮವಹಿಸಿ ಸರಳವಾದ ಕನ್ನಡದಲ್ಲಿ

ಈ ಗ್ರಂಥವನ್ನು ರಚಿಸಿದ್ದಾರೆ. ಕನ್ನಡದ ಸಮಸ್ತ ಆಸ್ತಿಕರು ಇದರ ಪ್ರಯೋಜನವನ್ನು ಪಡೆಯಬಹುದಾಗಿದೆ.

ಈ ಗ್ರಂಥವನ್ನು ರಚಿಸಿದ ಶ್ರೀ ರಾಘವೇಂದ್ರ ಆರೋಳ್ಳಿ ಅವರಿಗೆ ನಮ್ಮ ಆರಾಧ್ಯಮೂರ್ತಿ ಶ್ರೇಯಸ್ಸನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ. ಇದನ್ನು ಪ್ರಕಾಶಪಡಿಸಲು ಪರಿಶ್ರಮವಹಿಸಿದ ವೇದಾಂತಭಾರತಿಯ ಎಲ್ಲರಿಗೂ ನಮ್ಮ ಆರಾಧ್ಯದೇವರ ಅನುಗ್ರಹವನ್ನು ಪ್ರಾರ್ಥಿಸುತ್ತೇವೆ.

ಶೋಭಕೃತ್ ಸಂ॥ದ ಆಶ್ವಯುಜ ಶುಕ್ಲ
ಪಂಚಮೀ ಗುರುವಾರ 19–10–2023

**ನಾರಾಯಣಸ್ಮರಣಮ್**



# ಪ್ರಕಾಶಕರ ನುಡಿ

ಶ್ರೀ ಶಂಕರಭಗವತ್ಪಾದರು ಪ್ರಸ್ಥಾನತ್ರಯಭಾಷ್ಯವನ್ನು, ಅನೇಕ ಪ್ರಕರಣಗ್ರಂಥಗಳನ್ನು ಮತ್ತು ಅನೇಕ ದೇವತಾವಿಷಯಕವಾದ ಸ್ತೋತ್ರಗಳನ್ನು ರಚಿಸುವುದರ ಮೂಲಕ ಸಮಸ್ತ ಮನುಕುಲಕ್ಕೆ ಅದ್ವೈತತತ್ತ್ವವನ್ನು ನಿರ್ದುಷ್ಟವಾಗಿ ಬೋಧಿಸಿದ ಮಹಾಜ್ಞಾನಿಗಳು. ಭಗವತ್ಪಾದರ ಎಲ್ಲ ಸ್ತೋತ್ರಗಳನ್ನು ಮತ್ತು ಅನೇಕ ಪ್ರಕರಣಗ್ರಂಥಗಳನ್ನು ಕನ್ನಡಭಾಷೆಗೆ ಅನುವಾದ ಮಾಡಿ ಲೋಕಾರ್ಪಣೆ ಮಾಡಿದ ವೇದಾಂತಭಾರತೀ ಸಂಸ್ಥೆಯು ಸಾಂಪ್ರತ ಅದ್ವೈತವೇದಾಂತದ ಪ್ರಮೇಯ ಅಂಶಗಳಲ್ಲಿ ಒಂದಾದ 'ಅಧ್ಯಾಸ'ದ ಬಗ್ಗೆ ಭಗವತ್ಪಾದರು ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿದ ಅಂಶಗಳನ್ನೆಲ್ಲ ಕ್ರೋಢೀಕರಿಸಿ ಜನಸಾಮಾನ್ಯರಿಗೂ ತಿಳಿಯುವ ತಿಳಿಗನ್ನಡದಲ್ಲಿ ಪುಸ್ತಕದ ರೂಪದಲ್ಲಿ ಅದ್ವೈತಗ್ರಂಥಮಾಲೆಯ ಪ್ರಕಟಣೆಗಳ ಅಡಿಯಲ್ಲಿ ಪ್ರಕಟಗೊಳಿಸುತ್ತಿದೆ.

ಈ ವಿಷಯದ ಬಗ್ಗೆ ಬರೆದುಕೊಡಬೇಕೆಂದು ಡಾ॥ ರಾಘವೇಂದ್ರ ಆರೋಳ್ಳಿಯವರನ್ನು ಕೇಳಿಕೊಂಡಾಗ ಸಂತೋಷದಿಂದ ಒಪ್ಪಿ, ತಮ್ಮ ವಿದ್ವತ್ಪೂರ್ಣವಾದ ಶೈಲಿಯಲ್ಲಿ ಸರಳವಾಗಿ ಬರೆದುಕೊಟ್ಟು ಉಪಕರಿಸಿದ್ದಾರೆ. ಇವರಿಗೆ ಸಂಸ್ಥೆಯು ಕೃತಜ್ಞತಾಪೂರ್ವಕವಾದ ನಮನಗಳನ್ನು ಸಲ್ಲಿಸುತ್ತದೆ.

ಸಂಸ್ಥೆಯ ಮಹಾಸಂರಕ್ಷಕರಾದ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠಾಧೀಶ್ವರರಾದ **ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು** ಈ ಅದ್ವೈತಗ್ರಂಥಮಾಲೆಯ ಪ್ರಕಟಣೆಗಳಿಗೆ ದಿವ್ಯ ಸಂದೇಶವನ್ನಿತ್ತು

ನಮ್ಮನ್ನು ಅನುಗ್ರಹಿಸಿದ್ದಾರೆ. ಪರಮಪೂಜ್ಯ ಜಗದ್ಗುರುಗಳ ಚರಣಾರವಿಂದಗಳಿಗೆ ಅನಂತ ಸಾಷ್ಟಾಂಗ ಪ್ರಣಾಮಗಳು.

ಯಡತೊರೆ ಶ್ರೀಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧೀಶರಾದ ಮತ್ತು ವೇದಾಂತಭಾರತಿಯ ಸಂರಕ್ಷಕರಾದ **ಪರಮಪೂಜ್ಯ ಶ್ರೀಶ್ರೀಶಂಕರಭಾರತೀ ಮಹಾಸ್ವಾಮಿಗಳು** ಹಾಗೂ ತತ್ಕರಕಮಲಸಂಜಾತರಾದ **ಪರಮಪೂಜ್ಯ ಶ್ರೀಶ್ರೀ ಬ್ರಹ್ಮಾನಂದಭಾರತೀ ಸ್ವಾಮಿಗಳು** ನಮಗೆ ಈ ಪುಸ್ತಕವನ್ನು ಪ್ರಕಟಗೊಳಿಸಲು ಪರಿಪೂರ್ಣವಾದ ಆಶೀರ್ವಾದವನ್ನು ಮಾಡಿದ್ದಾರೆ. ಇವರಿಗೆ ನಮ್ಮ ಸಾಷ್ಟಾಂಗಪ್ರಣಾಮಗಳು.

ವೇದಾಂತಭಾರತಿಯ ಸಕ್ರಿಯ ಕಾರ್ಯಕರ್ತರಾದ ಶ್ರೀಯುತ ಎಸ್. ಹನುಮಂತರಾವ್ ಇವರು ತಮ್ಮ ಪೂಜ್ಯ ಮಾತಾಪಿತೃಗಳಾದ ದಿ॥ ಸಾವಿತ್ರಮ್ಮ ಹಾಗೂ ದಿ॥ ಸಿ. ಶೇಷಗಿರಿ ರಾವ್, ಚಿಕ್ಕಮಾವಳ್ಳಿ, ಬಸವನಗುಡಿ, ಬೆಂಗಳೂರು, ಇವರ ಸ್ಮರಣಾರ್ಥವಾಗಿ ಈ ಅದ್ವೈತಗ್ರಂಥಮಾಲೆಯ ಪುಸ್ತಕಗಳ ಮುದ್ರಣಕ್ಕೆ ಆರ್ಥಿಕ ಸಹಕಾರವನ್ನು ನೀಡಿರುತ್ತಾರೆ. ಅವರಿಗೆ ಅನಂತ ಕೃತಜ್ಞತೆಗಳು.

ಇದನ್ನು ಅಲ್ಪಸಮಯದಲ್ಲಿ ಮುದ್ರಿಸಿಕೊಟ್ಟ ಸ್ಕ್ಯಾನ್ ಪ್ರಿಂಟ್ ನ ಮಾಲೀಕರಾದ ಶ್ರೀ ಕೆ.ನಾರಾಯಣ ಇವರಿಗೆ ಧನ್ಯವಾದಗಳು.

ಶೋಭಕೃತ್ ಸಂ॥ದ ಆಶ್ವಯುಜ ಶುಕ್ಲ
ಪಂಚಮೀ ಗುರುವಾರ 19–10–2023

ಡಾ॥ ಶ್ರೀಧರ ಹೆಗಡೆ
ನಿರ್ದೇಶಕರು,
ವೇದಾಂತಭಾರತೀ

# ಅಧ್ಯಾಸಃ

## ಸೂತ್ರಭಾಷ್ಯದಲ್ಲಿ ಪ್ರಸ್ತುತವಾದ ವಿಷಯಗಳ ಒಂದು ಅವಲೋಕನ

ಈ ಪ್ರಪಂಚದಲ್ಲಿ ಜನಿಸಿದ ಎಲ್ಲ ಜೀವಿಗಳೂ ಸಹ ಸುಖವನ್ನು ಬಯಸುತ್ತಾರೆ ಹಾಗೂ ದುಃಖವನ್ನು ದ್ವೇಷಿಸುತ್ತಾರೆ. ಆ ಸುಖವು ನಿರಂತರವಾಗಿರಲೆಂದು ಕಠಿಣ ಶ್ರಮಗಳಿಂದ ಕೂಡಿದ ಕಾರ್ಯಗಳನ್ನು ನಿರ್ವಹಿಸುತ್ತಾ ಸಂಸಾರದಲ್ಲಿ ಮುಳುಗುತ್ತಾರೆ. ಆದರೆ ಕರ್ಮಬಂಧನದಿಂದ ಮುಕ್ತರಾಗುವ ಮಾರ್ಗವನ್ನು ಕಾಣದೆ ದುಃಖಿತರಾಗಿ ಪುನರಪಿ ಜನನಂ ಪುನರಪಿ ಮರಣಂ ಎಂಬಂತೆ ಜನನ-ಮರಣಚಕ್ರದಿಂದ ಪರಿಭ್ರಮಿಸುವರು. ಇವೆಲ್ಲವನ್ನೂ ಅರಿತ ಮಹರ್ಷಿ ವ್ಯಾಸರು ವೇದಗಳನ್ನು ವಿಭಜಿಸಿ ಅದರಲ್ಲಿರುವ ಅಲೌಕಿಕವಾದ ಧರ್ಮದ ವಿಚಾರಗಳನ್ನು ಸಾಮಾನ್ಯ ಜನರೂ ಅರಿಯುವಂತೆ ಪುರಾಣಗಳ ಹಾಗೂ ಮಹಾಭಾರತದ ಮೂಲಕ ಪ್ರಚುರಪಡಿಸಿದರು. ಜನರ ಉದ್ಧಾರಕ್ಕೋಸ್ಕರ ಉಪನಿಷತ್ತುಗಳ ಮಂಥನವನ್ನು ಮಾಡಿ ಅದರಲ್ಲಿ ಅಡಗಿರುವ ಆತ್ಮೋದ್ಧಾರದ ಮಾರ್ಗವನ್ನು ಬ್ರಹ್ಮಸೂತ್ರಗಳನ್ನು ರಚಿಸುವ ಮೂಲಕ ತೋರಿಸಿದರು. ಈ ಬ್ರಹ್ಮಸೂತ್ರಗಳಲ್ಲಿ ಅಡಗಿರುವ ಅದ್ವೈತಾತ್ಮವಾದವನ್ನು ಭಗವತ್ಪಾದಶಂಕರರು ಮನು-ಕುಲೋದ್ಧಾರಕ್ಕಾಗಿ ಭಾಷ್ಯಾದಿಗಳ ಮೂಲಕ ಸುಲಭವಾಗಿ

ತಿಳಿಯುವಂತೆ ಮಾಡಿದರು. ಅದರಲ್ಲೂ ಸಹ ಈ ಸಂಸಾರಕ್ಕೆ ಕಾರಣವಾದ, ಅದ್ವಿತೀಯನಾದ ಆತ್ಮನ ಅನೇಕ ಪ್ರಭೇದಗಳನ್ನು ಇಂದ್ರಜಾಲನ ಚಮತ್ಕಾರದಂತೆ ತೋರಿಸುವ, ಸಮಸ್ತ ವೇದಾಂತ ವಿಚಾರಗಳ ಆರಂಭಕ್ಕೆ ಕಾರಣವಾದ ಅಜ್ಞಾನವೆಂಬ ಮಾಯೆಯನ್ನು ಬೋಧಿಸಲು ಬ್ರಹ್ಮಸೂತ್ರಗಳ ಉಪೋದ್ಘಾತರೂಪವಾದ ಅಧ್ಯಾಸ ಭಾಷ್ಯವನ್ನು ರಚಿಸಿದರು. ಈ ಭಾಷ್ಯವು ಲೋಕದಲ್ಲಿ ಕಾಣುವ ಎಲ್ಲ ವ್ಯವಹಾರಗಳ ಮರ್ಮವನ್ನು ಪ್ರಪಂಚದ ವೈಚಿತ್ರ್ಯವನ್ನು ತೋರಿಸಿಕೊಡುತ್ತದೆ ಹಾಗೂ ಅದ್ವೀತಯನಾದ ಆತ್ಮನ ಚಿಂತನೆಯ ಅವಶ್ಯಕತೆಯನ್ನು ಅದರಿಂದಾಗುವ ಲಾಭವನ್ನೂ ಸಹ ತಿಳಿಯಪಡಿಸುತ್ತದೆ.

‘ಅಥಾತೋ ಬ್ರಹ್ಮಜಿಜ್ಞಾಸಾ’ ಎಂಬುದು ಬ್ರಹ್ಮಸೂತ್ರಗಳಲ್ಲಿ ಮೊದಲನೆಯ ಸೂತ್ರ. ಇದು ಯೋಗ್ಯರು ಬ್ರಹ್ಮನ ಚಿಂತನೆಯನ್ನು ಮಾಡಬೇಕು ಎಂಬುದನ್ನು ತಿಳಿಸುತ್ತದೆ. ನಾಲ್ಕು ವಿಧವಾದ ಸಾಧನಗಳನ್ನು ಹೊಂದಿರುವವರು ಬ್ರಹ್ಮಜಿಜ್ಞಾಸೆಗೆ ಯೋಗ್ಯರಾಗುತ್ತಾರೆ. ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರಫಲಭೋಗವಿರಾಗ, ಶಮಾದಿಷಟ್ಕಸಂಪತ್ತಿ ಹಾಗೂ ಮುಮುಕ್ಷುತ್ವ ಎಂಬುದು ಆ ನಾಲ್ಕು ಸಾಧನಗಳು. ಈ ಸಾಧನಗಳನ್ನು ಹೊಂದಿರುವ ಮುಮುಕ್ಷುಗಳು ಅಂದರೆ ಮೋಕ್ಷವೆಂಬ ಫಲವನ್ನು ಬಯಸುವವರು ಬ್ರಹ್ಮನ ಚಿಂತನೆಗೆ ಯೋಗ್ಯರು ಎಂಬುದು ಸೂತ್ರದಲ್ಲಿನ ಅತಃ ಎಂಬ ಶಬ್ದವು ತಿಳಿಸುತ್ತದೆ. ಆದ್ದರಿಂದಲೇ

ಮೋಕ್ಷಕ್ಕೆ ಬ್ರಹ್ಮಜ್ಞಾನವು ಸಾಧನವು ಎಂಬುದು ಸಿದ್ಧವಾಗುತ್ತದೆ. ಲೋಕದಲ್ಲೂ ಸಹ ಹಸಿವಿನ ನಿವಾರಣೆಗೋಸ್ಕರ ಆಹಾರವನ್ನು ಬಯಸುತ್ತಾರೆ. ಹಾಗಾಗಿ ಆಹಾರವು ಹಸಿವಿನ ನಿವಾರಣೆಗೆ ಸಾಧನವೆಂದು ಸಿದ್ಧವಾಗಿದೆ. ಜ್ಞಾನವು ಅಜ್ಞಾನವನ್ನು ಹೋಗಲಾಡಿಸುತ್ತದೆ. ಬ್ರಹ್ಮಜ್ಞಾನವೂ ಸಹ ಪ್ರಪಂಚಕ್ಕೆ ಕಾರಣವಾದ ಅಜ್ಞಾನವನ್ನು ಹೋಗಲಾಡಿಸುತ್ತದೆ. ಮೋಕ್ಷಕ್ಕೆ ವಿರುದ್ಧವಾದ ಬಂಧವು ಆ ಬ್ರಹ್ಮನ ಅಜ್ಞಾನದಿಂದ ಉಂಟಾಗಿದೆ ಎಂಬುದನ್ನೂ ಸಹ ಇದರಿಂದ ತಿಳಿಯಬಹುದಾಗಿದೆ. ಬಂಧವೆಂಬುದು ಆತ್ಮ ಮತ್ತು ಅನಾತ್ಮವಸ್ತುಗಳಲ್ಲಿ ಇರುವ ಪರಸ್ಪರ ಭೇದವನ್ನು ಅರಿಯದೇ ಅನಾತ್ಮವನ್ನು ಆತ್ಮವೆಂದು ತಿಳಿಯುವಿಕೆಯೆಂಬ ಅಧ್ಯಾಸವೇ ಆಗಿದೆ. ಇದು ಬ್ರಹ್ಮನೆಂಬ ಅದ್ವೀತೀಯತತ್ತ್ವದ ಅಜ್ಞಾನದಿಂದ ಉಂಟಾಗಿದೆ. ಆ ಬ್ರಹ್ಮನ ನಿಜಸ್ವರೂಪದ ದರ್ಶನವಾದೊಡನೆಯೇ ಅಜ್ಞಾನವು ನಾಶವಾಗುತ್ತದೆ. ಅಜ್ಞಾನದಕಾರ್ಯವಾದ ಅಧ್ಯಾಸವೆಂಬ ಬಂಧವೂ ಸಹ ಹೊರಟುಹೋಗುತ್ತದೆ. ಬ್ರಹ್ಮನ ದರ್ಶನವೆಂಬ ಸಾಧನವು ಈ ಬ್ರಹ್ಮನ ಚಿಂತನೆಯಿಂದ ಸಿದ್ಧಿಸಿ ಮೋಕ್ಷವೆಂಬ ಪರಮೋತ್ಕೃಷ್ಟವಾದ ಫಲವನ್ನು ಕೊಡುವುದರಿಂದ ಬ್ರಹ್ಮಜಿಜ್ಞಾಸೆಯನ್ನು ಮಾಡಿಸಲು ಹೊರಟ ಅದ್ವೈತಶಾಸ್ತ್ರವೂ ಪ್ರಯೋಜನವುಳ್ಳದ್ದಾಗಿದೆ ಎಂದು ತಿಳಿಯುತ್ತದೆ.

ಈ ವೇದಾಂತಶಾಸ್ತ್ರವು ಪ್ರಧಾನವಾಗಿ ಬ್ರಹ್ಮನನ್ನು ಬೋಧಿಸಲು ಹೊರಟಿರುವುದರಿಂದ ಬ್ರಹ್ಮನೇ ಈ ಶಾಸ್ತ್ರದ

ಪ್ರಧಾನವಿಷಯವಾಗಿದೆ. ‘ಸತ್ಯಂ ಜ್ಞಾನಮನಂತಂ ಬ್ರಹ್ಮ’ ಎಂಬಿತ್ಯಾದಿ ಶ್ರುತಿಗಳು ಬ್ರಹ್ಮನು ಸತ್ಯಸ್ವರೂಪನೂ ಜ್ಞಾನಸ್ವರೂಪನೂ ತ್ರಿವಿಧಪರಿಚ್ಛೇದರಹಿತನೂ ಆಗಿರುವನೆಂದು ತಿಳಿಸುತ್ತವೆ. ಬ್ರಹ್ಮಶಬ್ದವೂ ಸಹ ನಿರತಿಶಯವೃದ್ಧಿಯನ್ನು ಹೊಂದಿರುವ ಸರ್ವವ್ಯಾಪಕನಾದ ಹುಟ್ಟುಸಾವುಗಳಿಲ್ಲದ ಬ್ರಹ್ಮನಿಗಿಂತ ಬೇರೆಯಾದ ಇನ್ನೊಂದ ವಸ್ತುವಿಲ್ಲ ಎಂಬುದಾಗಿ ತಿಳಿಸುತ್ತದೆ. ಇದನ್ನೇ ಶಾಸ್ತ್ರಗಳಲ್ಲಿ ತ್ರಿವಿಧ ಪರಿಚ್ಛೇದರಹಿತನು ಎಂಬುದಾಗಿ ತಿಳಿಸಲಾಗಿದೆ. ಹುಟ್ಟುಸಾವುಗಳನ್ನು ಹೊಂದಿರುವ ವಸ್ತುಗಳು ಕಾಲಪರಿಚ್ಛೇದದಿಂದ ಕೂಡಿರುತ್ತವೆ. ಅಲ್ಪಪರಿಮಾಣದಿಂದ ಕೂಡಿರುವ ನಮ್ಮ ಕಣ್ಣಿಗೆ ಕಾಣುವ ಗಿಡಮರಗಳೇ ಮೊದಲಾದ ವಸ್ತುಗಳು ನಿರ್ದಿಷ್ಟ ಪ್ರದೇಶಗಳಲ್ಲಿ ಇರುವುದರಿಂದ ದೇಶಪರಿಚ್ಛೇದದಿಂದ ಕೂಡಿವೆ. ತನಗಿಂತ ಭಿನ್ನವಾದ ವಸ್ತುಗಳಿದ್ದಲ್ಲಿ ಅವು ವಸ್ತುಪರಿಚ್ಛೇದದಿಂದ ಕೂಡಿವೆ ಎಂದರ್ಥ. ವೇದಾಂತಗಳು ಉಪದೇಶಿಸುವ ಬ್ರಹ್ಮನು ಈ ದೇಶಾದಿಪರಿಚ್ಛೇದಗಳಿಂದ ಕೂಡಿರದೇ ಇರುವವನಾದ್ದರಿಂದ ತ್ರಿವಿಧಪರಿಚ್ಛೇದರಹಿತನೂ ಅನಂತನೂ ಆಗಿದ್ದಾನೆ. ಅಂತಹ ಬ್ರಹ್ಮನೇ ವೇದಾಂತಶಾಸ್ತ್ರದ ವಿಷಯವಸ್ತುವಾಗಿದ್ದಾನೆ.

ಈ ವಿಷಯದಲ್ಲಿ ದಾರ್ಶನಿಕರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರು ಇಂತಹ ಬ್ರಹ್ಮನೆಂಬ ವಿಷಯವು ಇರಲು ಸಾಧ್ಯವಿಲ್ಲವೆನ್ನುತ್ತಾರೆ. ಏಕೆಂದರೆ ಬ್ರಹ್ಮನು

ವಸ್ತುಪರಿಚ್ಛೇದದಿಂದ ರಹಿತನಾಗಲು ಸಾಧ್ಯವಿಲ್ಲ. ಬ್ರಹ್ಮನಿಗಿಂತ ಭಿನ್ನವಾದ ಜೀವನು ಇರುವುದರಿಂದ ವಸ್ತುಪರಿಚ್ಛೇದವು ಬ್ರಹ್ಮನಲ್ಲಿ ಇದೆ. ಜೀವನು ಅಲ್ಪಜ್ಞನಾಗಿದ್ದರಿಂದ ಬ್ರಹ್ಮನಾಗಲು ಸಾಧ್ಯವಿಲ್ಲ. ನಾವೆಲ್ಲರೂ ಸಹ ನಾನು ಬ್ರಹ್ಮನಲ್ಲವೆಂಬ ಸ್ಪಷ್ಟವಾದಂತಹ ಅರಿವನ್ನು ಹೊಂದಿರುವುದರಿಂದ ಜೀವಬ್ರಹ್ಮರ ನಡುವೆ ಭೇದವು ಇದೆ. ಹೀಗಿರಲು ವೇದಾಂತಶಾಸ್ತ್ರದಲ್ಲಿ ಪ್ರತಿಪಾದಿಸಲು ಪ್ರತಿಜ್ಞಾತವಾದ ಬ್ರಹ್ಮನೆಂಬ ವಿಷಯವೇ ಅಪ್ರಸಿದ್ಧವಾದ್ದರಿಂದ ಅಂತಹ ಬ್ರಹ್ಮನ ಚಿಂತನೆಯು ಅಸಾಧ್ಯವೇ ಆಗಿದೆ. ಬ್ರಹ್ಮನ ಜ್ಞಾನವೇ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿ ಬಂಧನದಿಂದ ಮುಕ್ತಿ-ಗೊಳಿಸುತ್ತದೆ ಎಂಬುದು ವೇದಾಂತಿಗಳ ಅಂಬೋಣ. ಆದರೇ ಬ್ರಹ್ಮನೆಂಬ ವಿಷಯವೇ ಅಪ್ರಸಿದ್ಧವಾದ್ದರಿಂದ ಅದರ ಜ್ಞಾನವಾಗದೇ ಇರಲು ಬಂಧದ ನಾಶವೂ ಸಹ ಆಗದೇ ಇರುವುದರಿಂದ ಚಿಂತನೆಗೆ ವಿಷಯವು ಮತ್ತು ಚಿಂತನೆಯ ಪ್ರಯೋಜನವು ಇಲ್ಲದೇ ಇರುವುದರಿಂದ ಬ್ರಹ್ಮನ ಕುರಿತಾದ ಚಿಂತನೆಯು ವ್ಯರ್ಥವೇ ಸರಿ ಎಂಬುದಾಗಿ ಕೆಲವರು ಆಕ್ಷೇಪವನ್ನು ಮಾಡುತ್ತಾರೆ. ಅಧ್ಯಾಸವು ಸಿದ್ಧವಾದಲ್ಲಿ ಈ ಆಕ್ಷೇಪವೆಂಬ ಕಳಂಕದ ನಾಶವಾಗುತ್ತದೆ. ಹಗ್ಗದಲ್ಲಿ ಹಾವು ಅಧ್ಯಸ್ತವಾಗಲು ನಾವು ಹಾವನ್ನು ಕಂಡು ಭಯಪಡುತ್ತೇವೆ. ಯಾವಾಗ ಹಗ್ಗದ ದರ್ಶನವಾಗುವುದೋ ಆಗ ಹಗ್ಗದ ಅಜ್ಞಾನವು ನಾಶವಾಗಲು ಹಾವೆಂಬ ಅಧ್ಯಾಸವೂ ಸಹ

ಹೊರಟು ಹೋಗುವುದು. ಆದ್ದರಿಂದಲೇ ಅಧ್ಯಾಸವನ್ನು ಬೋಧಿಸಲು ಭಗವತ್ಪಾದ ಶಂಕರರು ಬ್ರಹ್ಮಸೂತ್ರಗಳ ವ್ಯಾಖ್ಯಾನವನ್ನು ಮಾಡುವುದಕ್ಕಿಂತ ಮೊದಲು ಅಧ್ಯಾಸದ ಕುರಿತಾಗಿ ಭಾಷ್ಯವನ್ನು ರಚಿಸಿದರು. ಅಲ್ಲಿನ ಆರಂಭದ ಕೆಲವು ವಾಕ್ಯಗಳು ಹೀಗಿವೆ -

**युष्मदस्मत्प्रत्ययगोचरयोर्विषयविषयिणोस्तमःप्रकाशवद्विरुद्धस्वभावयोरितरेतरभावानुपपत्तौ सिद्धायाम्, तद्धर्माणामपि सुतरामितरेतरभावानुपपत्तिः- इत्यतः अस्मत्प्रत्ययगोचरे विषयिणि चिदात्मके युष्मत्प्रत्यय-गोचरस्य विषयस्य तद्धर्माणां चाध्यासः तद्विपर्ययेण विषयिणस्तद्धर्माणां च विषयेऽध्यासो मिथ्येति भवितुं युक्तम्।**

ಅಧ್ಯಾಸವೆಂಬುದು ಸಿದ್ಧವಾದಲ್ಲಿ ತತ್ತ್ವಜ್ಞಾನವು ಕ್ರಮೇಣ ಮೋಕ್ಷಕ್ಕೆ ಸಾಧನವೆಂದು ನಿರ್ಣಯಿಸಬಹುದು. ಆದರೆ ಅಧ್ಯಾಸವೆಂಬುದು ಇರಲಿಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ಪರಪಸ್ಪರ ಬೇರೆಯೆಂದು ತಿಳಿದಿರುವ ಕತ್ತಲು ಹಾಗೂ ಬೆಳಕುಗಳು ಒಂದೆ ಎಂಬ ಭ್ರಮೆಯು ಹೇಗೆ ಅಸಾಧ್ಯವೋ ಹಾಗೆಯೇ ಆತ್ಮನು ಮತ್ತು ಅನಾತ್ಮವಸ್ತುಗಳು ಪರಸ್ಪರ ಬೇರೆಯೇ ಎಂದು ಎಲ್ಲರೂ ತಿಳಿದಿರುವುದರಿಂದ ಅವೇರಡೂ ಒಂದೇ ಎಂಬ ಅಧ್ಯಾಸವು ಉಂಟಾಗಲು

ಸಾಧ್ಯವಿಲ್ಲ. ಆತ್ಮವು ಚೇತನವಸ್ತುವಾಗಿದೆ. ಹಾಗಾಗಿಯೇ ಆತ್ಮನನ್ನು ಜ್ಞಾನಸ್ವರೂಪನು ವಿಷಯೀ ಎಂದು ಕರೆಯುತ್ತಾರೆ. ಆತ್ಮಕ್ಕಿಂತ ಮಿಗಿಲಾದ ಎಲ್ಲವಸ್ತುಗಳೂ ಜಡವಾಗಿದ್ದು ಜ್ಞಾನದಲ್ಲಿ ವಿಷಯಗಳಾಗುತ್ತವೆ. ಹಾಗಾಗಿಯೇ ಚೇತನ ಮತ್ತು ಜಡಸ್ವರೂಪರಾದ ಆತ್ಮಾನಾತ್ಮರ ಅಭೇದಾಧ್ಯಾಸವು ಸಾಧ್ಯವಿಲ್ಲ. ಯಾವಾಗ ಹಗ್ಗವು ಹಾವಾಗಿ ತೋರುತ್ತದೋ ಆಗ ಹಾವಿನ ಧರ್ಮಗಳು ಹಗ್ಗದಲ್ಲಿ ತೋರುತ್ತವೆ. ಇದನ್ನೇ ಇತರೇತರಧರ್ಮಾಧ್ಯಾಸವೆಂದು ಕರೆಯುತ್ತಾರೆ. ಒಂದರ ಧರ್ಮಗಳು ಇನ್ನೊಂದರಲ್ಲಿ ತೋರುವುದು ಎಂಬುದು ಅದರ ಅರ್ಥ. ಹಗ್ಗ ಹಾವು ಮೊದಲಾದ ಧರ್ಮಿಗಳಲ್ಲಿ ಪರಸ್ಪರ ಅಭೇದಾಧ್ಯಾಸವಾದಲ್ಲಿ ಅವುಗಳ ಧರ್ಮಗಳೂ ಸಹ ಅಧ್ಯಾಸವನ್ನು ಹೊಂದುತ್ತವೆ. ಅಂದರೆ ಹಾವಿನ ಧರ್ಮಗಳು ಹಗ್ಗದಲ್ಲಿ ಹಗ್ಗದ ಧರ್ಮಗಳು ಹಾವಿನಲ್ಲಿ ತೋರುತ್ತವೆ. ಆದರೆ ಆತ್ಮ ಬೇರೆ ಅನಾತ್ಮ ಬೇರೆ ಎಂಬ ಸ್ಪಷ್ಟವಾದ ಜ್ಞಾನವಿರಲು ಆತ್ಮಾನಾತ್ಮರ ಅಭೇದಾಧ್ಯಾಸವು ಅಸಾಧ್ಯವಾದಾಗ ಅವುಗಳಲ್ಲಿರುವ ಧರ್ಮಗಳ ಇತರೇತರಾಧ್ಯಾಸವೂ ಸಹ ಆಗಲು ಸಾಧ್ಯವಿಲ್ಲ. ಹಾಗಾಗಿ ಆತ್ಮಾನಾತ್ಮರ ಅಧ್ಯಾಸ-ವೆಂಬುದೇ ಅಸಾಧ್ಯವಾದಾಗ ಅದನ್ನು ಹೋಗಲಾಡಿಸುವ ಜ್ಞಾನಾದಿಸಾಧನಗಳ ಚಿಂತೆಯು ಸಾಧ್ಯವೇ ಇಲ್ಲ. ಆದ್ದರಿಂದ ಪ್ರಯೋಜನವಿಲ್ಲದ ಕಾರಣ ಅದ್ವೈತಶಾಸ್ತ್ರವನ್ನು ಆರಂಭಿಸ-ಬಾರದು ಎಂಬುದಾಗಿ ಕೆಲವರು ಆಕ್ಷೇಪವನ್ನು ಮಾಡುತ್ತಾರೆ.

ಆದರೆ ಅಧ್ಯಾಸದ ಸಿದ್ಧಿಯನ್ನು ಅದರ ಸ್ವರೂಪವನ್ನೂ ಸಹ ಭಗವತ್ಪಾದ ಶಂಕರರು ಮುಂದಿನ ಭಾಷ್ಯದಲ್ಲಿ ತಿಳಿಸಿಕೊಡುತ್ತಾರೆ.

**तथाप्यन्योन्यस्मिन्नन्योन्यात्मकतामन्योन्यधर्मांश्चाध्यस्येतरेतराविवेकेन अत्यन्तविविक्तयोर्धर्मधर्मिणोः मिथ्या-ज्ञाननिमित्तः सत्यानृते मिथुनीकृत्य 'अहमिदम्' 'ममेदम्' इति नैसर्गिकोऽयं लोकव्यवहारः ॥**

ಜ್ಞಾನಾಧ್ಯಾಸ ಮತ್ತು ಅರ್ಥಾಧ್ಯಾಸವೆಂಬ ಎರಡು ಅಧ್ಯಾಸಗಳು ಅನಾದಿಕಾಲದಿಂದಲೂ ಸಹಜವಾಗಿಯೇ ಉಂಟಾಗಿವೆ. ಭ್ರಮೆಯನ್ನೇ ಜ್ಞಾನಾಧ್ಯಾಸವೆಂದು, ಭ್ರಮೆಯಲ್ಲಿ ವಿಷಯವಾದ ಸರ್ಪಾದಿವಸ್ತುಗಳನ್ನು ಅರ್ಥಾಧ್ಯಾಸವೆಂದು ಕರೆಯುತ್ತಾರೆ. ಆದ್ದರಿಂದಲೇ ಲೋಕದಲ್ಲಿ ಆತ್ಮನಿಗಿಂತ ಭಿನ್ನವಾದ ವಸ್ತುಗಳು ಹಾಗೂ ಅದರ ಜ್ಞಾನವು ಅನಾದಿಕಾಲದಿಂದಲೇ ನಮ್ಮ ಅನುಭವಕ್ಕೆ ಬರುತ್ತಲಿವೆ. ಆದ್ದರಿಂದಲೇ ಭ್ರಮೆಯೆಂಬ ಅಧ್ಯಾಸಕ್ಕೆ ಪ್ರಮಾತ್ಮಕವಾದ ಜ್ಞಾನದಿಂದ ಉಂಟಾದ ಸಂಸ್ಕಾರದ ಅಪೇಕ್ಷೆಯಿಲ್ಲ. ಅನಾದಿಕಾಲದಿಂದ ಭ್ರಮೆಯು ಹಾಗೂ ಅದರಿಂದ ಉಂಟಾದ ಸಂಸ್ಕಾರವು ಪರಸ್ಪರ ಸಹಕಾರದಿಂದ ಉಂಟಾಗುತ್ತಲಿವೆ. ಈ ಅಧ್ಯಾಸವು ಅಜ್ಞಾನವೆಂಬ ಮಿಥ್ಯಾಜ್ಞಾನದ ಕಾರಣದಿಂದ ಉಂಟಾಗುತ್ತಲಿದೆ. ಈ ಅಜ್ಞಾನವು ಅದ್ವಿತೀಯ

ಬ್ರಹ್ಮತತ್ತ್ವವನ್ನು ಆವರಿಸುತ್ತದೆ. ಹಾಗೂ ಆ ಅವಿದ್ಯೆಯು ಬ್ರಹ್ಮತತ್ತ್ವವಾದ ಆತ್ಮನಲ್ಲಿ ಅನಾತ್ಮನ್ನು ಅನಾತ್ಮ-ಧರ್ಮಗಳನ್ನೂ ತೋರಿಸುತ್ತದೆ. ಹಾಗಾಗಿ ಅಧ್ಯಾಸಕ್ಕೆ ಅವಿದ್ಯೆಯು ಉಪಾದಾನಕಾರಣವಾಗಿದೆ. ಭ್ರಮೆಗೆ ದೋಷದ ಅಪೇಕ್ಷೆ ಇರುವುದರಿಂದ ಅವಿದ್ಯೆಯು ಅಧ್ಯಾಸಕ್ಕೆ ನಿಮಿತ್ತ ಕಾರಣವೂ ಆಗಿದೆ. ಹಾಗಾಗಿ ಆತ್ಮನೆಂಬ ಸತ್ಯವಸ್ತುವಿನಲ್ಲಿ ಅನೃತವೆಂಬ ಜಡವಸ್ತುವಿನ ಅಭೇದವು ತೋರಲು ಸತ್ಯಾನೃತವೆಂಬ ವಸ್ತುಗಳು ಒಂದಾಗಿ ಅವಿವೇಕವೆಂಬ ಅಧ್ಯಾಸವು ಉಂಟಾಗುತ್ತದೆ. ಆದ್ದರಿಂದಲೇ ಜೀವಿಗಳು ಅದ್ವಿತೀಯಬ್ರಹ್ಮಸ್ವರೂಪರೇ ಆಗಿದ್ದರೂ ಸಹ ನಾನು ಧನಿಕ ನನ್ನದು ಧನಾದಿ ಸಂಪತ್ತು ಎಂಬಿತ್ಯಾದಿ ಭ್ರಮೆಯನ್ನು ಹೊಂದಿರುತ್ತಾರೆ.

आह — कोऽयमध्यासो नामेति । उच्यते — स्मृतिरूपः परत्र पूर्वदृष्टावभासः । तं केचित् अन्यत्रान्यधर्माध्यास इति वदन्ति । केचित्तु यत्र यदध्यासः तद्विवेकाग्रहनिबन्धनो भ्रम इति । अन्ये तु यत्र यदध्यासः तस्यैव विपरीतधर्मत्वकल्पनामाचक्षते । सर्वथापि तु अन्यस्यान्यधर्मावभासतां न व्यभिचरति । तथा च

लोकेऽनुभवः — शुक्तिका हि रजतवदवभासते, एकश्चन्द्रः सद्वितीयवदिति ॥

ಈ ಅಧ್ಯಾಸದ ಸ್ವರೂಪವೇನು ಎಂಬ ಜಿಜ್ಞಾಸೆ ಉಂಟಾಗುವುದು ಸಹಜ. ಹಾಗಾಗಿಯೇ ಭಗವತ್ಪಾದರು ಅದರ ಸ್ವರೂಪವನ್ನು ತಿಳಿಸಿಕೊಡುತ್ತಾರೆ. ಈ ಅಧ್ಯಾಸವು ದೋಷಗಳಿಂದ ಸಂಸ್ಕಾರದಿಂದ ಹಾಗೂ ಅಧಿಷ್ಠಾನದ ಜೊತೆ ಇಂದ್ರಿಯಸಂಬಧವಿರುವ ಕಾರಣದಿಂದ ಉಂಟಾಗುತ್ತದೆ. ಹಾಗಾಗಿಯೇ ಸ್ಮೃತಿರೂಪಃ ಎನ್ನುತ್ತಾರೆ. ಸ್ಮೃತಿಯು ಹೇಗೆ ಸಂಸ್ಕಾರದಿಂದ ಉಂಟಾಗುತ್ತದೆಯೋ ಹಾಗೆಯೇ ಅಧ್ಯಾಸವೂ ಸಹ ಸಂಸ್ಕಾರದಿಂದ ಉಂಟಾಗುತ್ತದೆ ಎಂಬುದು ಅದರ ಅರ್ಥ. ಮೊದಲು ನೋಡಿದಂತಹ ಸರ್ಪಾದಿವಸ್ತುಗಳು ಯಾವಾಗ ಹಗ್ಗದಲ್ಲಿ ತಾದಾತ್ಮ್ಯದಿಂದ ತೋರುತ್ತವೆಯೋ ಆಗ ಆ ತೋರುವಿಕೆಯು ಅಧ್ಯಾಸವಾಗಿದೆ. ಇಲ್ಲದ ಸರ್ಪವು ತೋರಲು ಸಾಧ್ಯವಾಗುವುದಿಲ್ಲವಾದ್ದರಿಂದ ಅಲ್ಲಿ ಪ್ರಾತಿಭಾಸಿಕವೆಂಬ ಸರ್ಪದ ಅಧ್ಯಾಸವು ಉಂಟಾಗುತ್ತದೆ. ಹಾಗಾಗಿಯೇ ಸರ್ಪವಿದೆಯೆಂಬ ಜ್ಞಾನಾಧ್ಯಾಸವು ಉಂಟಾಗುತ್ತದೆ.

ಈ ಜ್ಞಾನಾಧ್ಯಾಸವನ್ನು ಕೆಲವರು ಅನ್ಯಥಾ-ಖ್ಯಾತಿಯೆಂದು ಬೌದ್ಧರು ಆತ್ಮಖ್ಯಾತಿಯೆಂದೂ ಕರೆಯುತ್ತಾರೆ. ಅವರ ಪಕ್ಷದಲ್ಲೂ ಸಹ ಹಗ್ಗದಲ್ಲಿ ಹಾವಿನ ಧರ್ಮಗಳು ತೋರುತ್ತವೆ ಎಂಬುದು ಅಂಗೀಕರಿಸಲ್ಪಟ್ಟಿದೆ. ಇನ್ನೂ

ಕೆಲವರು ಹಗ್ಗ ಮತ್ತು ಹಾವುಗಳ ನಡುವೆ ಇರುವ ಭೆದವು ತಿಳಿಯದೇ ಇರಲು ಉಂಟಾಗುವ ಜ್ಞಾನವನ್ನೇ ಭ್ರಮೆಯೆಂದು ಕರೆಯುತ್ತಾರೆ. ವಸ್ತುತಃ ಭ್ರಮೆಯೆಂಬುದೇ ಇಲ್ಲ ಎಂಬುದಾಗಿ ಅಖ್ಯಾತಿವಾದಿಗಳು ಹೇಳುತ್ತಾರೆ. ಇವರ ಪಕ್ಷದಲ್ಲೂ ಸಹ ಹಗ್ಗದಲ್ಲಿ ಹಾವಿನ ಭೇದವು ತಿಳಿಯದೇ ಇರುವುದರಿಂದ ಹಾವಿನ ಧರ್ಮಗಳು ಹಗ್ಗದಲ್ಲಿ ತೋರುತ್ತವೆ. ಕೆಲವರು ಹಗ್ಗಾದಿಗಳಲ್ಲಿ ಹಾವಿನ ಅಧ್ಯಾಸವು ಎಲ್ಲಿ ಆಗುತ್ತದೆಯೋ ಅಲ್ಲಿ ಅಸತ್ಯಭೂತವಾದ ಹಾವು ಹಗ್ಗದಲ್ಲಿ ತೋರುತ್ತದೆ. ಈ ಪಕ್ಷದಲ್ಲೂ ಸಹ ಹಾವಿನಧರ್ಮಗಳು ಹಗ್ಗದಲ್ಲಿ ತೋರುತ್ತದೆ. ಲೋಕದಲ್ಲಿನ ಅನುಭವವು ಸಹ ಕಪ್ಪೆಚಿಪ್ಪು ಬೆಳ್ಳಿಯೆಂದು ತೋರುತ್ತಿದೆ, ಒಬ್ಬ ಚಂದ್ರನು ಎರಡಾಗಿ ತೋರುತ್ತಿದ್ದಾನೆ ಎಂದು.

**कथं पुनः प्रत्यगात्मन्यविषये अध्यासो विषयतद्धर्माणाम्? सर्वो हि पुरोऽवस्थिते विषये विषयान्तरमध्यस्यति; युष्मत्प्रत्ययापेतस्य च प्रत्यगात्मनः अविषयत्वं ब्रवीषि । उच्यते — न तावदयमेकान्तेनाविषयः, अस्मत्प्रत्ययविषयत्वात् अपरोक्षत्वाच्च प्रत्यगात्मप्रसिद्धेः; न चायमस्ति नियमः — पुरोऽवस्थित एव विषये विषयान्तरमध्यसितव्यमिति; अप्रत्यक्षेऽपि ह्याकाशे बालाः**

तलमलिनतादि अध्यस्यन्ति; एवमविरुद्धः प्रत्यगात्मन्यपि अनात्माध्यासः ॥

ಆತ್ಮಾನಾತ್ಮರ ತಾದಾತ್ಮ್ಯಾಧ್ಯಾಸವಾಗಲು ಸಾಧ್ಯವಿಲ್ಲ. ಏಕೆಂದರೆ ಲೋಕದಲ್ಲಿ ಕಣ್ಣೆದುರಿನಲ್ಲಿರುವ ಹಗ್ಗವೇ ಮೊದಲಾದ ವಸ್ತುಗಳಲ್ಲಿ ಹಾವೇ ಮೊದಲಾದವುಗಳ ಅಧ್ಯಾಸವನ್ನು ನೋಡಬಹುದು. ಹಗ್ಗ ಮತ್ತು ಹಾವುಗಳೆರಡೂ ಜ್ಞಾನವಿಷಯಗಳೇ ಆಗಿವೆ. ಹಾಗಾಗಿ ಇಂದ್ರಿಯ-ಸಂಬಂಧವನ್ನು ಹೊಂದಿರುವ ವಿಷಯದಲ್ಲಿ ವಿಷಯಾಂತರದ ಅಧ್ಯಾಸವು ಸಂಭವಿಸುತ್ತದೆ ಎಂದು ಹೇಳಬಹುದು. ಆದರೆ ಆತ್ಮನು ಇಂದ್ರಿಯಗಳಿಗೆ ನಿಲುಕದವನು ಅವಿಷಯನು ಆಗಿರುವುದರಿಂದ ಆತ್ಮನಲ್ಲಿ ಅನಾತ್ಮನ ಅಧ್ಯಾಸವು ಸಾಧ್ಯವಿಲ್ಲ ಎಂಬುದಾಗಿ ಆಕ್ಷೇಪವು ಬರಲು ಭಗವತ್ಪಾದ ಶಂಕರರು ಅದಕ್ಕೆ ಸಮಾಧಾನವನ್ನು ಉಚ್ಯತೇ ಎಂಬ ಗ್ರಂಥಭಾಗದಲ್ಲಿ ತಿಳಿಸುತ್ತಾರೆ. ಆತ್ಮನೆಂಬುವನು ವಿಷಯಿ-ಯಾಗಿದ್ದರೂ ಸಹ ವಿಷಯವಾಗಲು ಸಾಧ್ಯವಿಲ್ಲ ಎಂದು ನಿರ್ಣಯಿಸಲಾಗದು. ಏಕೆಂದರೆ ನಾನು ಎಂಬಿತ್ಯಾದಿ ಜ್ಞಾನಗಳಲ್ಲಿ ಆತ್ಮನೇ ವಿಷಯವಾಗಿದ್ದಾನೆ. ಆತ್ಮನ ಕುರಿತಾದ ಪ್ರತ್ಯಕ್ಷಜ್ಞಾನವೂ ಸಹ ಪ್ರಸಿದ್ಧವಾಗಿದೆ. ಎಲ್ಲ ಭ್ರಮೆಯೂ ಪ್ರತ್ಯಕ್ಷವಾಗಿ ತೋರುವ ಪದಾರ್ಥದಲ್ಲಿ ಇನ್ನೊಂದು ಪದಾರ್ಥದ ಅಧ್ಯಾಸರೂಪವಾಗಿದೆ ಎಂಬುದಾಗಿ ಹೇಳಲೂ ಸಾಧ್ಯವಿಲ್ಲ. ಕಣ್ಣಿಗೆ ಕಾಣದ ಆಕಾಶದಲ್ಲಿ ಬಾಲಾದಿಗಳು ನೀಲಿ